## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಬಿ.ಟಿ.ಸುರೇಶ, ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಸೋಮವಾರಪೇಟೆ ಹಾಗೂ ಕುಮಾರಿ ಎಸ್.ಪಿ.ಅಚಿತ, ಅಂದಿನ ಪಂಚಾಯತ್ ಅಭಿವೃದ್ಧಿ, ಬ್ಯಾಡಗೊಟ್ಟ ಗ್ರಾಮ ಪಂಚಾಯತ್, ಸೋಮವಾರಪೇಟೆ ತಾಲ್ಲೂಕ್ ಇವರ ವಿರುದ್ಧ ಶಿಸ್ತು ಕ್ರಮ - ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಬಗ್ಗೆ - ಆದೇಶ.

ಓದಲಾಗಿದೆ:- 1) ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ : Compt/Uplok/Mys/657/2011/ARE-6, ದಿನಾಂಕ. 05.12.2016.

2) ಮಾನ್ಯ ಉಪಲೋಕಾಯುಕ್ತರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿಯಲ್ಲಿ ಸಲ್ಲಿಸಿರುವ ವರದಿ ಸಂಖ್ಯೆ : Compt/Uplok/Mys-657/2011/ARE-6, ದಿನಾಂಕ. 28.11.2016.

------

**ಪ್ರಸ್ತಾವನೆ:-**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 05.12.2016ರ ಪತ್ರದ ಜೊತೆ ಮಾನ್ಯ ಉಪಲೋಕಾಯುಕ್ತರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12 (3) ರನ್ವಯ ನೀಡಿರುವ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕಳುಹಿಸುತ್ತಾ, ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸಿನಂತೆ ಕ್ರಮವಹಿಸಲು ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರು ಲೋಕಾಯುಕ್ತ ಕಾಯ್ದೆ ಕಲಂ 12 (3)ರಂತೆ ಸಲ್ಲಿಸಿರುವ ವರದಿ ಹಾಗೂ ಲಗತ್ತಿಸಿರುವ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಶ್ರೀ ವೆಂಕಟೇಶ.ಬಿ.ಹೆಚ್, ಹೂವೇಗೌಡ, ಬೆಂಬಳೂರು ಗ್ರಾಮ & ಅಂಚೆ, ಸೋಮವಾರಪೇಟೆ ತಾಲ್ಲೂಕ್, ಕೊಡಗು ಜಿಲ್ಲೆ ಇವರು 2010-11ನೇ ಸಾಲಿನ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸೋಮವಾರಪೇಟೆ ತಾಲ್ಲೂಕಿನ ಬೆಂಬಳೂರು ಗ್ರಾಮದ ಪೊನ್ನಮ್ಮ ಮನೆಯಿಂದ ಶ್ಯಾಮಣ್ಣ ಮಾಸ್ಟರ್ ಮನೆಯವರೆಗೆ ಚರಂಡಿ ಮಾಡಿ ಪೈಪ್ ಅಳವಡಿಸುವ ಕಾಮಗಾರಿಯಲ್ಲಿ ಹಣ ದುರುಪಯೋಗದ ಕುರಿತಂತೆ ಕರ್ನಾಟಕ ಲೋಕಾಯುಕ್ತ ಕಚೇರಿಗೆ ಸಲ್ಲಿಸಿದ ದೂರಿನಲ್ಲಿ ಈ ಕೆಳಕಂಡ ಅಧಿಕಾರಿ / ನೌಕರರ ವಿರುದ್ಧ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ :-

1. ಶ್ರೀಮತಿ ಎಂ.ಬಿ.ದೇವರಾಜಮ್ಮ, ಪಿಡಿಒ, ಬ್ಯಾಡಗೊಟ್ಟ ಗ್ರಾಮ ಪಂಚಾಯತ್
2. ಶ್ರೀ ಚಂದ್ರೇಗೌಡ, ಕಾರ್ಯದರ್ಶಿ, ಬ್ಯಾಡಗೊಟ್ಟ ಗ್ರಾಮ ಪಂಚಾಯತ್

-2

3. ಶ್ರೀ ಸುರೇಶ್, ಸಹಾಯಕ ಇಂಜಿನಿಯರ್
4. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ಸೋಮವಾರಪೇಟೆ

ಸದರಿ ದೂರಿಗೆ ಸಂಬಂಧಿಸಿದಂತೆ ಮಾನ್ಯ ಉಪಲೋಕಾಯುಕ್ತರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3)ರ ವರದಿಯಲ್ಲಿ, ಇದೇ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಕ್ರಮವಹಿಸಿದ ಆದೇಶ ಸಂಖ್ಯೆ : ಒಂಬುಡ್ಸ್‌ಮನ್ : ಕೊಜಿಪಂ : ಆದೇಶ : 1 : 2011-12, ದಿನಾಂಕ : 30.03.2016ಅನ್ನು ಪ್ರಸ್ತಾಪಿಸುತ್ತಾ ಈ ಕೆಳಕಂಡಂತೆ ತಿಳಿಸಿರುತ್ತಾರೆ :-

1) 2010-11ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲಾದ ರೂ. 50000.00 ಅಂದಾಜು ವೆಚ್ಚದ ಬೆಂಬಳೂರು ಪೊನ್ನಮ್ಮ ಮನೆಯಿಂದ ಶ್ಯಾಮಣ್ಣ ಮಾಸ್ಟರ್ ಮನೆಯವರೆಗೆ ಚರಂಡಿ ಮಾಡಿ ಪೈಪು ಅಳವಡಿಸುವ ಕಾಮಗಾರಿಯನ್ನು ಸಮುಚಿತ ಮಾರ್ಗದ ಮೂಲಕ ಪೂರ್ವಾನುಮೋದನೆ ಇಲ್ಲದೆ ಕಾಮಗಾರಿಯ ಸ್ಥಳ ಬದಲಾಯಿಸಿ ರೂ. 49,991/-ಗಳ ಆರ್ಥಿಕ ನಷ್ಟಕ್ಕೆ (1) ಶ್ರೀ ಬಿ.ಟಿ.ಸುರೇಶ್, ಹಿಂದಿನ ಸಹಾಯಕ ಇಂಜಿನಿಯರ್ ಮತ್ತು (2) ಕುಮಾರಿ ಎಸ್.ಪಿ.ಲಿಖಿತ, ಹಿಂದಿನ ಗ್ರಾಮ ಪಂಚಾಯತ್ ಅಧಿಕಾರಿ ರವರು ಕಾರಣರಾಗಿರುತ್ತಾರೆ.

2) 2010-11ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲಾದ ರೂ. 50000.00 ಅಂದಾಜು ವೆಚ್ಚದ ಬೆಂಬಳೂರು ಸುಗ್ಗಿಕಟ್ಟೆಯಿಂದ ಈಶ್ವರ ದೇವಸ್ಥಾನದ ಗದ್ದೆಯವರೆಗೆ ಪೈಪ್ ಲೈನ್ ನಿರ್ಮಾಣ ಕಾಮಗಾರಿಯನ್ನು ಸಮುಚಿತ ಮಾರ್ಗದ ಮೂಲಕ ಪೂರ್ವಾನುಮೋದನೆ ಇಲ್ಲದೆ ಕಾಮಗಾರಿಯ ಸ್ಥಳ ಬದಲಾಯಿಸಿ ರೂ. 49,991/-ಗಳ ಆರ್ಥಿಕ ನಷ್ಟಕ್ಕೆ (1) ಶ್ರೀಮತಿ ಎಂ.ಬಿ.ದೇವರಾಜಮ್ಮ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, (2) ಶ್ರೀ ಬಿ.ಟಿ.ಸುರೇಶ್, ಹಿಂದಿನ ಸಹಾಯಕ ಇಂಜಿನಿಯರ್ ಮತ್ತು (3) ಕುಮಾರಿ ಎಸ್.ಪಿ.ಲಿಖಿತ, ಹಿಂದಿನ ಗ್ರಾಮ ಪಂಚಾಯತ್ ಅಧಿಕಾರಿ ರವರು ಕಾರಣರಾಗಿರುತ್ತಾರೆ.

ಈ ಮೇಲಿನ ಆಪಾದಿತರುಗಳ ಪೈಕಿ ಶ್ರೀಮತಿ ಎಂ.ಬಿ.ದೇವರಾಜಮ್ಮ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವರು ಆಗಸ್ಟ್ 2015ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ್ದು, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ ಆದೇಶ ಸಂಖ್ಯೆ : ಒಂಬುಡ್ಸ್‌ಮನ್ : ಕೊಜಿಪಂ : ಆದೇಶ : 1 : 2011-12, ದಿನಾಂಕ : 30.03.2016ರಲ್ಲಿ ವಿಧಿಸಲಾದ ದಂಡನೆಯಂತೆ ಅವರ ಪಾಲಿನ ಹಣವನ್ನು ಸರ್ಕಾರಕ್ಕೆ ಜಮೆ ಮಾಡಿದ್ದರಿಂದ ಅವರ ವಿರುದ್ಧ ಹಾಗೂ ಸದರಿ ಆದೇಶದಲ್ಲಿ ಶ್ರೀ ಚಂದ್ರೇಗೌಡ, ಕಾರ್ಯದರ್ಶಿ, ಬ್ಯಾಡಗೊಟ್ಟ ಗ್ರಾಮ ಪಂಚಾಯತ್ ಮತ್ತು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ಸೋಮವಾರಪೇಟೆ ಇವರುಗಳ ವಿರುದ್ಧ ವಿಚಾರಣೆ ಕೈಗೊಳ್ಳುವುದರ ಬಗ್ಗೆ ಶಿಫಾರಸ್ಸು ಮಾಡಿರುವುದಿಲ್ಲ.

ಮುಂದುವರೆದು, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ ಆದೇಶ ಸಂಖ್ಯೆ : ಒಂಬುಡ್ಸ್‌ಮನ್ : ಕೊಜಿಪಂ : ಆದೇಶ : 1 : 2011-12, ದಿನಾಂಕ : 30.03.2016ರನ್ವಯ ಈ ಕೆಳಕಂಡ ಆಪಾದಿತ ಅಧಿಕಾರಿ / ನೌಕರರಿಗೆ ವಿಧಿಸಲಾದ ದಂಡನೆಯಂತೆ ಅವರ ಪಾಲಿನ ಹಣವನ್ನು ಸರ್ಕಾರಕ್ಕೆ ಜಮೆ ಮಾಡದೇ, ಆದೇಶವನ್ನು ಪರಿಪಾಲಿಸದೇ ಇದ್ದುದಕ್ಕಾಗಿ ಆಕ್ಷೇಪಣೆ ಕೇಳಿದ್ದಕ್ಕೆ ಪ್ರತಿಯಾಗಿ ಅವರುಗಳು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಅವರ ವಿರುದ್ಧದ ಆರೋಪಗಳನ್ನು ಅಲ್ಲಗಳೆದಿರುವುದಕ್ಕೆ ಸೂಕ್ತವಾದ ದಾಖಲೆಗಳನ್ನು ಒದಗಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿಯವರು ಸರ್ಕಾರಿ ನೌಕರರಾಗಿ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರದೆ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪ ಎಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು

-3

1966ರ 3(1)ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಪ್ರಕರಣವನ್ನು ತಮಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ :-

1. ಶ್ರೀ ಸುರೇಶ್, ಹಿಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಸೋಮವಾರಪೇಟೆ (ಪ್ರಸಕ್ತ ನಂ.2, ಗುಣ ನಿಯಂತ್ರಣ ಉಪ-ವಿಭಾಗ, ಗೋರೂರು, ಹೊಳೆನರಸೀಪುರ ತಾಲ್ಲೂಕ್, ಹಾಸನ ಜಿಲ್ಲೆ)

2. ಕುಮಾರಿ ಎಸ್.ಪಿ.ಅಚಿತ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬ್ಯಾಡಗೊಟ್ಟ ಗ್ರಾಮ ಪಂಚಾಯತ್, ಸೋಮವಾರಪೇಟೆ ತಾಲ್ಲೂಕ್ (ಪ್ರಸಕ್ತ ಗೌಡಳ್ಳಿ ಗ್ರಾಮ ಪಂಚಾಯತ್, ಸೋಮವಾರಪೇಟೆ ತಾಲ್ಲೂಕ್)

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸಿದೆ. ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ ಆದೇಶ ಸಂಖ್ಯೆ : ಒಂಬುಡ್ಸ್‌ಮನ್ : ಕೊಜಿಪಂ : ಆದೇಶ : 1 : 2011-12, ದಿನಾಂಕ : 30.03.2016ರನ್ವಯ ಮೇಲ್ಕಂಡ ಆಪಾದಿತ ಅಧಿಕಾರಿ / ನೌಕರರಿಗೆ ವಿಧಿಸಲಾದ ದಂಡನೆಯಂತೆ ಅವರ ಪಾಲಿನ ಹಣವನ್ನು ಸರ್ಕಾರಕ್ಕೆ ಜಮೆ ಮಾಡದೇ, ಆದೇಶವನ್ನು ಪರಿಪಾಲಿಸದೇ ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಸದರಿಯವರ ವಿರುದ್ಧದ ಆರೋಪದ ಬಗ್ಗೆ ಇಲಾಖಾ ವಿಚಾರಣೆ ನಡೆಸುವುದು ಅವಶ್ಯವಿರುತ್ತದೆ.

ಆದ್ದರಿಂದ, ಪ್ರಕರಣದಲ್ಲಿ ಭಾಗಿಯಾಗಿರುವ ಸದರಿ ಆಪಾದಿತರ ವಿರುದ್ಧದ ಆರೋಪದ ಬಗ್ಗೆ ವಿವರವಾದ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ : ಗ್ರಾಅಪ 175 ಇಎನ್‌ಕ್ಯೂ 2016**
**ಬೆಂಗಳೂರು, ದಿನಾಂಕ.16.01.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡ ಅಧಿಕಾರಿ / ನೌಕರರ ವಿರುದ್ಧದ ಆರೋಪದ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ)ರ ಅನುಸಾರ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ :-

1. ಶ್ರೀ ಸುರೇಶ್, ಹಿಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಸೋಮವಾರಪೇಟೆ (ಪ್ರಸಕ್ತ ನಂ.2, ಗುಣ ನಿಯಂತ್ರಣ ಉಪ-ವಿಭಾಗ, ಗೋರೂರು, ಹೊಳೆನರಸೀಪುರ ತಾಲ್ಲೂಕ್, ಹಾಸನ ಜಿಲ್ಲೆ)

-4

2. ಕುಮಾರಿ ಎಸ್.ಪಿ.ಅಚಿತ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬ್ಯಾಡಗೊಟ್ಟ ಗ್ರಾಮ ಪಂಚಾಯತ್, ಸೋಮವಾರಪೇಟೆ ತಾಲ್ಲೂಕ್ (ಪ್ರಸಕ್ತ ಗೌಡಳ್ಳಿ ಗ್ರಾಮ ಪಂಚಾಯತ್, ಸೋಮವಾರಪೇಟೆ ತಾಲ್ಲೂಕ್)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿದ್ದೇಶ್ ಪೂತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು - ಮೇಲಿನ ಕ್ರ.ಸಂ.(1)ರಲ್ಲಿ ಓದಲಾದ ದಿನಾಂಕ : 05.12.2016ರ ಅ.ಸ.ಪತ್ರದೊಂದಿಗೆ ಕಳುಹಿಸಿರುವ ಮೂಲ ದಾಖಲೆಗಳನ್ನು ಈ ಆದೇಶದೊಂದಿಗೆ ಲಗತ್ತಿಸಿ, ಹಿಂದಿರುಗಿಸಲಾಗಿದೆ.
3. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
4. ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ.
7. ಸಂಬಂಧಿತ ಅಧಿಕಾರಿ / ನೌಕರರಿಗೆ - ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ ರವರ ಮುಖಾಂತರ
8. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
9. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು- ಎ & ಸಿ).
10. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಅಪರ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
11. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಸೂಚನಾ ಫಲಕ : ಕಂಪ್ಯೂಟರ್ ಸೆಲ್.

*****